ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 25-11-1995.

# *ಪರಮತ, ಪರಚಿಂತನೆ ಹಾಗೂ ಪರದರ್ಶನದಿಂದ ಮುಕ್ತರಾಗಿ ಪರೋಪಕಾರಿಯಾಗಿರಿ.*

(परमत, परचिन्तन और परदर्शन से मुक्त बनो और पर-उपकार करो)

ಇಂದು ಬಾಪ್‌ದಾದಾರವರು ತಮ್ಮ ನಾಲ್ಕು ಕಡೆಯ ತಂದೆಯ ಮಕ್ಕಳಲ್ಲಿ ಯಾವ ವಿಶೇಷ ಆತ್ಮರಿದ್ದಾರೋ ಆ ಸರ್ವ ವಿಶೇಷ ಆತ್ಮರನ್ನು ನೋಡುತ್ತಿದ್ದಾರೆ. ಅವರು ಭಾರತದವರಾಗಿರಲಿ ಅಥವಾ ವಿದೇಶದವರಾಗಿರಲಿ, ಯಾವುದಾದರೂ ಮೂಲೆಯಲ್ಲಿರಲಿ ಆದರೆ ಬಾಪ್ದಾದಾರವರು ಸರ್ವ ವಿಶೇಷ ಅತ್ಮರನ್ನು ಸಮೀಪದಲ್ಲಿ ನೋಡುತ್ತಿದ್ದಾರೆ. ಅವರಿಗೆ ತಮ್ಮ ವಿಶೇಷ ಮಕ್ಕಳನ್ನು ನೋಡಿ ಹರ್ಷಿತವಾಗುತ್ತಿದೆ. ಹೇಗೆ ನಿಮಗೆ ತಂದೆಯನ್ನು ನೋಡಿ ಖುಷಿಯಾಗುತ್ತದೆ ಅಲ್ಲವೇ ಖುಷಿಯಾಗುತ್ತದೆಯೇ? ಆದ್ದರಿಂದಲೇ ಓಡೋಡಿ ಬಂದಿದ್ದೀರಲ್ಲವೇ. ನನ್ನ ಒಬ್ಬೊಬ್ಬ ಮಗು ವಿಶೇಷ ಆತ್ಮ ಆಗಿದ್ದಾರೆಂದು ತಂದೆಗೂ ಸಹ ಖುಷಿಯಾಗುತ್ತದೆ. ವೃದ್ಧರಾಗಿರಬಹುದು, ಅವಿದ್ಯಾವಂತರಾಗಿರಬಹುದು, ಸಣ್ಣ ಮಕ್ಕಳಾಗಿರಬಹುದು, ಯುವಕರಾಗಿರಬಹುದು, ಪ್ರವೃತ್ತಿಯವರಾಗಿರಬಹುದು. ಆದರೆ ಇಡೀ ವಿಶ್ವದ ಮುಂದೆ ವಿಶೇಷ ಆತ್ಮರಾಗಿದ್ದೀರಿ ಎಷ್ಟೊಂದು ದೊಡ್ಡ ದೊಡ್ಡ ವೈಜ್ಞಾನಿಕರು ಚಮತ್ಕಾರವನ್ನು ತೋರಿಸುವವರು ಇದ್ದಾರೆ ಚಂದ್ರ ಗ್ರಹದವರೆಗೂ ಹೋಗುವವರೂ ಇದ್ದಾರೆ ಆದರೆ ತಂದೆಯ ವಿಶೇಷ ಮಕ್ಕಳ ಮುಂದೆ ಅವರು ಸಹ ಅಜ್ಞಾನಿಗಳಾಗಿದ್ದಾರೆ. ಐದು ತತ್ವಗಳನ್ನು ತಿಳಿದುಕೊಂಡು ಬಿಟ್ಟರು. ಅವುಗಳ ಮೇಲೆ ವಿಜಯವನ್ನು ಸಾಧಿಸಿಬಿಟ್ಟರು. ಆದರೆ ಅತಿ ಸಣ್ಣ ಬಿಂದುವಾದ ಆತ್ಮನನ್ನು ಅರಿತುಕೊಂಡಿದ್ದಾರೇಯೇ? ಇಲ್ಲಿ ಸಣ್ಣ ಮಗುವಿಗೂ ನೀನು ಯಾರು? ಎಂದು ಕೇಳಿದರೆ ಏನು ಹೇಳುವರು? ನಾನು ಆತ್ಮನಾಗಿದ್ದೇನೆ ಎಂದು ಹೇಳುತ್ತಾರಲ್ಲವೆ. ಆತ್ಮವು ಎಲ್ಲಿರುತ್ತದೆ ಎಂದು ಕೇಳಿದರೆ ಅದನ್ನೂ ಹೇಳುವರು ಆದರೆ ಆತ್ಮನ ಬಗ್ಗೆ ವೈಜ್ಞಾನಿಕರೊಂದಿಗೆ ಕೇಳಿರಿ ಅವರು ಇಲ್ಲಿಯವರೆಗೂ ಆತ್ಮದ ಜ್ಞಾನವನ್ನು ತಿಳಿದುಕೊಂಡಿಲ್ಲ. ಚರಿತ್ರೆಯ ಗಣನೆಯಿಂದ ಈ ಪ್ರಪಂಚದ ಗಣನೆಯಿಂದ ಅವರು ವಿಶೇಷ ಆತ್ಮರಾಗಿರಬಹುದು. ಆದರೆ ಯಾರು ಸ್ವಯಂನ್ನು ತಿಳಿದುಕೊಂಡಿಲ್ಲವೋ ಅವರಿಗಿಂತಲೂ ಇಲ್ಲಿಯ ಐದು ವರ್ಷದ ಮಗುವೇ ವಿಶೇಷವಾಗಿಬಿಟ್ಟಿತು. ನಿಮ್ಮ ಯಜ್ಞದ ಪ್ರಾರಂಭದ ಸಮಯದ ತುಂಬಾ ನಶೆಯ ಗೀತೆ ಇದೆ. ಅದು ಯಾವ ಗೀತೆ ಆಗಿದೆ ಎನ್ನುವುದು ನೆನಪಿದೆಯೇ? ಎಷ್ಟೇ ದೊಡ್ಡ ಸಿರಿವಂತ ಮಾಲೀಕನಾಗಿದ್ದರೂ ಅವರು ಆತ್ಮನನ್ನು ತಿಳಿದುಕೊಂಡಿಲ್ಲ. ಆದ್ದರಿಂದ ಎಷ್ಟೇ ದೊಡ್ಡವರಾಗಿದ್ದರೂ, ನೇತರಾಗಿದ್ದರೂ, ಅಭಿನೇತರಾಗಿದ್ದರೂ ಸ್ವಯಂನ್ನು ತಿಳಿದುಕೊಂಡಿರದಿದ್ದರೆ ಏನು ತಿಳಿದುಕೊಂಡಂತಾಯಿತು? ಆದ್ದರಿಂದ ಇಂತಹ ವಿಶೇಷ ಆತ್ಮರಾಗಿದ್ದೀರಿ. ಇಲ್ಲಿಯ ಅವಿದ್ಯಾವಂತ ವೃದ್ಧ ಮಾತೆ ಒಂದು ಕಡೆ ಇದ್ದಾಳೆ ಹಾಗೂ ಇನ್ನೊಂದು ಕಡೆ ಒಬ್ಬ ಮಹಾತ್ಮರಿದ್ದಾರೆ. ಆದರೆ ವೃದ್ಧ ಮಾತೆಯು ನಶೆಯಿಂದ ಏನು ಹೇಳುತ್ತಾಳೆ - ನಾನು ಪರಮಾತ್ಮನನ್ನು ಪಡೆದು ಬಿಟ್ಟೆನು

ಎಂದು. ವೃದ್ಧ ಮಾತೆಯರು ಹೀಗೆ ಹೇಳುತ್ತಿರಲ್ಲವೇ? ಹೇಳುತ್ತೀರಾ? ಆದರೆ ಮಹಾತ್ಮರು ಏನು ಹೇಳುತ್ತಾರೆ? ಪರಮಾತ್ಮನನ್ನು ಪಡೆಯುವುದು ತುಂಬಾ ಕಷ್ಟವಾಗಿದೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ನೂರು ವರ್ಷದವರೂ ನಿಶ್ಚಯ ಬುದ್ಧಿಯುಳ್ಳವರಾಗಿದ್ದರೆ ಏನು ಹೇಳುತ್ತಾರೆ? ನೀವು ಹುಡುಕುತ್ತಲೇ ಇದ್ದೀರಿ ನಾವಂತೂ ಪಡೆದುಬಿಟ್ಟೆವು ಎಂದು ಹೇಳುತ್ತಾರೆ. ಆದ್ದರಿಂದ ಮಹಾತ್ಮರು ಸಹ ನಿಮ್ಮ ಮುಂದೆ ಏನಾಗಿ ಬಿಟ್ಟರು? ಪ್ರವೃತ್ತಿಯಲ್ಲಿರುವವರು ನಶೆಯಿಂದ ಹೇಳುತ್ತಾರೆ ನಾವು ಡಬಲ್ ಪಲ್ಲಂಗದ ಮೇಲೆಯೂ ಮಲಗುತ್ತೇವೆ ಆದರೂ ಸಹ ನಾವು ಪವಿತ್ರವಾಗಿದ್ದೇವೆ ಎಂದು ಹೇಳುತ್ತಾರೆ. ಅನೇಕರು ಡಬಲ್ ಸುಪ್ಪೊತ್ತಿಗೆಯ ಮೇಲೆ ಮಲಗುತ್ತಾರಲ್ಲವೇ. ದಂಪತಿಗಳು ಒಟ್ಟಿಗೆ ಇದ್ದರೂ ನಮ್ಮ ಮಧ್ಯದಲ್ಲಿ ತಂದೆ ಇದ್ದಾರೆ ಎಂದು ಹೇಳುತ್ತಾರೆ. ಆದರೆ ಮಹಾತ್ಮರು ಏನು ಹೇಳುತ್ತಾರೆ? ಬೆಂಕಿ ಹತ್ತಿಯು ಹೊಟ್ಟಿಗೆ ಇರುವುದು ಅಸಂಭವಾಗಿದೆ ಎಂದು ಹೇಳುತ್ತಾರೆ. ಆದರೆ ನಿಮಗೆ ಒಟ್ಟಿಗೆ ಇರುತ್ತಲೂ ಪವಿತ್ರವಾಗಿರುವುದು ಏನಾಗಿದೆ? ಪ್ರವೃತ್ತಿಯವರು ಹೇಳಿರಿ ಪವಿತ್ರರಾಗಿರುವುದು ಕಷ್ಟವಾಗಿದೆಯೋ ಅಥವಾ ಸಹಜವಾಗಿದೆಯೋ? ಏನಾಗಿದೆ ಸಹಜವಾಗಿದೆಯೋ ಅಥವಾ ಒಮ್ಮೊಮ್ಮೆ ಕಷ್ಟವಾಗಿ ಬಿಡುತ್ತದೆಯೋ? ಯಾರು ಪಕ್ಕಾ ಆಗಿದ್ದಾರೋ ಅವರು ದೊಡ್ಡ ಸಭೆಯ ಮಧ್ಯದಲ್ಲಿಯೂ ಸಹ ನಶೆಯಿಂದ ಹೇಳಿಬಿಡುತ್ತಾರೆ - ಪವಿತ್ರತೆಯಂತೂ ನಮ್ಮ ಸ್ವಧರ್ಮವಾಗಿದೆ ಎಂದು ಪರಧರ್ಮವಲ್ಲ ಸ್ವಧರ್ಮವಾಗಿದೆ. ಹೀಗೆ ಸ್ವಧರ್ಮವು ಸಹಜವಾಗಿರುತ್ತದೆಯೋ ಅಥವಾ ಕಷ್ಟವಾಗಿರುತ್ತದೆಯೋ, ಅಪವಿತ್ರತೆಯು ಪರಧರ್ಮವಾಗಿದೆ. ಆದರೆ ಪವಿತ್ರತೆಯು ಸ್ವಧರ್ಮವಾಗಿದೆ. ಹೀಗೆ ನಿಮ್ಮ ಈ ವಿಶೇಷತೆಯನ್ನು ಅರಿತುಕೊಂಡಿದ್ದೀರಲ್ಲವೇ? ಏಕೆಂದರೆ ಹೊಸ ಹೊಸಬರು ಸಹ ಅನೇಕರು ಬಂದಿದ್ದಾರಲ್ಲವೇ. ಆದರೆ ಎಷ್ಟೇ ಹೊಸಬರಾಗಿದ್ದರೂ ಸಹ ಪವಿತ್ರತೆಯ ಪಾಠವಂತು ಪಕ್ಕಾ ಆಗಿದೆಯಲ್ಲವೇ? ಹಲವು ಮಕ್ಕಳು ಹೀಗೂ ಮಾಡುತ್ತಾರೆ. ತಂದೆಯೊಂದಿಗೆ ಮಿಲನ ಮಾಡುವುದಕ್ಕೆ ಮುಂಚೆ ಒಂದು ವರ್ಷ ಪೂರ್ತಿ ಪವಿತ್ರವಾಗಿ ಇರಬೇಕೆಂಬ ಪಕ್ಕಾ ನಿಯಮವಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಮಧುಬನದಲ್ಲಿ ಬರುವವರೆಗೇನೋ ಸರಿಯಾಗಿರುತ್ತಾರೆ. ಆದರೆ ಮದುಬನದಲ್ಲಿ ಬಂದುಬಿಟ್ಟರು, ನೋಡಿಬಿಟ್ಟರು, ಆಮೇಲೆ ವಾಪಸ್ಸು ಹೋದ ಮೇಲೆ ಹುಡುಗಾಟಿಕೆಯವರಾಗಿಬಿಡುತ್ತಾರೆ. ಆದರೆ ಪವಿತ್ರತೆಯ ಪ್ರತಿಜ್ಞೆಯನ್ನು ಯಾರೊಂದಿಗೆ ಮಾಡಿದರು? ತಂದೆಯೊಂದಿಗೆ ಪ್ರತಿಜ್ಞೆ ಮಾಡಿ ಆಮೇಲೆ ಒಂದುವೇಳೆ ಎಚ್ಚರ ತಪ್ಪುವವರಾದರೆ ಯಾರಿಗೆ ನಷ್ಟವಾಗುವುದು? ಬ್ರಾಹ್ಮಣ ಪರಿವಾರದಲ್ಲಂತೂ ಒಬ್ಬರು ಹೋದರೆ ಹತ್ತು ಮಂದಿ ಬರುತ್ತಾರೆ. ಆದರೆ ದುರ್ಬಲರಾಗುವ ಆ ಆತ್ಮರಿಗೆ ನಷ್ಟವಾಗುತ್ತದೆ. ಆದ್ದರಿಂದ ಯಾರು ಯಾರು ಹೊಸ ಹೊಸಬರು ಮೊದಲನೆಯ ಸಲ ಬಂದಿದ್ದೀರೋ ಅವರು ಕೈ ಎತ್ತಿರಿ ಅನೇಕರಿದ್ದಾರೆ. ತಂದೆಯ ಮನೆಯಲ್ಲಿ ಬಂದುಬಿಟ್ಟಿದ್ದೀರಿ ಇದಂತೂ ಭಾಗ್ಯದ ಸಂಕೇತವಾಗಿದೆ. ಆದರೆ ಅದೃಷ್ಟದ ರೇಖೆಯನ್ನು ಎಂದೂ ಕಡಿಮೆ ಮಾಡಿಕೊಳ್ಳಬೇಡಿರಿ ಅದೃಷ್ಟವನ್ನು ಹೆಚ್ಚು ಮಾಡಿಕೊಳ್ಳಬೇಕು.

ಎಷ್ಟು ಜನ ಬಂದಿದ್ದಿರೋ ಎಲ್ಲರ ಹೆಸರು ರೆಜಿಸ್ಟರ್‌ನಲ್ಲಿ ಇದ್ದೇ ಇದೆ ರೆಜಿಸ್ಟರ್‌ನಲ್ಲಿ ನಿಮ್ಮ ಹೆಸರನ್ನು ಪಕ್ಕಾ ಮಾಡಿಕೊಂಡಿದ್ದೀರೋ ಅಥವಾ ಸ್ವಲ್ಪ ಕಚ್ಚಾ ಆಗಿದೆಯೋ? ಒಳ್ಳೆಯದು ಯಾರು ಯಾರು ಹೊಸಬರು ಎಲ್ಲೆಲ್ಲಿಂದಲಾದರೂ ಬಂದಿದ್ದರೆ ಶಿಕ್ಷಕಿಯರ ಬಳಿಯಂತೂ ಅವರ ಪಟ್ಟಿ ಇದ್ದೇ ಇದೆ ಹಾಗೂ ಹಾಜರಿಯನ್ನೂ ಸಹ ಹಾಕುತ್ತಾರೋ ಅಥವಾ ಹಾಕುವುದಿಲ್ಲವೋ? ಯಾವ ಸೇವಾಕೇಂದ್ರದಲ್ಲಿ ಹಾಜರಿ ಗುರುತನ್ನು ಹಾಕುವುದಿಲ್ಲವೋ? ಅಂತಹ ಸೇವಾಕೇಂದ್ರವು

ಯಾವುದಾದರೂ ಇದೆಯೇ? ಶಿಕ್ಷಕಿಯರು ಹೇಳಿರಿ. ಒಮ್ಮೊಮ್ಮೆ ನಿದ್ರೆ ಬರಬಹುದು, ಕ್ಲಾಸಿನಲ್ಲಿ ಬರಲು ಸಾಧ್ಯವಾಗಲಿಲ್ಲ ಆದ್ದರಿಂದ ಪ್ರತಿದಿನವೂ ಹಾಜರಿ ಗುರುತು ಬಿಳುತ್ತದೆಯೇ? ಪ್ರತಿದಿನದ ರಿಜಿಸ್ಟರ್ ಹಾಗೂ ಹಾಜರಿ ಗುರುತು ಇದೆ ಎಂದು ಯಾವ ಶಿಕ್ಷಕಿಯರು ಹೇಳುತ್ತಾರೋ ಅವರು ಕೈ ಎತ್ತಿರಿ. ಒಳ್ಳೆಯದು ರೆಗ್ಯುಲರ್ ಆಗಿದ್ದಾರೋ ಅಥವಾ ಎರಡು ಮೂರು ದಿನ ತಪ್ಪಿಸಿಬಿಡುತ್ತಾರೋ ನಿಗದಿ ಮಾಡಿದ್ದೀರಾ? ಎಲ್ಲವೂ ಶಿಕ್ಷಕಿಯರ ಬಳಿ ಇದ್ದರೆ ಚಪ್ಪಾಳೆ ತಟ್ಟಿರಿ ಹಾಗಾದರೆ ಈಗೇನು ಮಾಡುವಿರಿ 3-4 ಮಾಸದ ನಂತರ ನೀವು ಯಾರು ಹೊಸಬರನ್ನು ಕರೆತಂದಿದ್ದೀರೋ ಸಹೋದರರಾಗಿರಲಿ, ಸಹೋದರಿಯರಾಗಿರಲಿ ಎಷ್ಟು ಮಂದಿ ಹೊಸಬರು ಬಂದಿದ್ದರು ಅಷ್ಟು ಕಾಯಂ ಆಗಿ ಇದ್ದಾರೋ ಅಥವಾ ಎಲ್ಲಿಗಾದರೂ ಸುತ್ತು ಹಾಕಲು ಹೋಗಿದ್ದಾರೋ ಎನ್ನುವುದನ್ನು ತಿಳಿಸಿರಿ ಏಕೆಂದರೆ ಮೊದಲು ಹೊಸದರಲ್ಲಿ ಸ್ವಲ್ಪ ನಶೆ ಇರುತ್ತದೆ ಆಮೇಲೆ ಕ್ರಮೇಣವಾಗಿ ಕಡಿಮೆಯಾಗುತ್ತದೆ. ಹೀಗೆ ನಾಲ್ಕು ತಿಂಗಳಿನ ನಂತರ ಎಷ್ಟು ಹೊಸಬರು ಎಷ್ಟು ಕಾಯಂ ಆಗಿ ಇದ್ದಾರೋ ಅಥವಾ ಸುತ್ತು ಹಾಕಲು ಎಲ್ಲಿಗಾದರೂ ಹೋಗಿದ್ದಾರೋ ಎನ್ನುವುದನ್ನು ತಿಳಿಸಿರಿ ಹಲವರು ಸುತ್ತು ಹಾಕಲು ಹೋಗುತ್ತಾರೆ. ಎರಡು ವರ್ಷದ ಮಾಯೆಯ ಯಾತ್ರೆಯನ್ನು ಮಾಡಿ ಆಮೇಲೆ ಇಲ್ಲಿಗೆ ಬರುತ್ತಾರೆ. ಆದ್ದರಿಂದ ಫಲಿತಾಂಶವನ್ನು ಬರೆದು ಕಳುಹಿಸಿರಿ ಆದರೆ ಎಷ್ಟು ಶಬ್ದಗಳಲ್ಲಿ? ಕೇವಲ ಏನು ಬರೆಯಬೇಕೆಂದರೆ 60 ಮಂದಿ ಹೊಸಬರು ಬಂದರು ಹಾಗೂ 60 ಮಂದಿಯು ಇದ್ದಾರೆ ಅಥವಾ 60 ಮಂದಿ ಬಂದರು ಈಗ 40 ಮಂದಿ ಇದ್ದಾರೆ ಹೀಗೆ ಕೇವಲ ಎರಡು ಶಬ್ದಗಳನ್ನು ಬರೆಯಿರಿ ಹಾಗೂ ಪ್ರತ್ಯೇಕವಾಗಿ ಬರೆಯಿರಿ ಹಾಗೂ ವಿಶೇಷವಾಗಿ ರತನ್ಮೋಹಿನಿಯ ಹೆಸರು ಬರೆದು ಹೊರಗಡೆ ಬ್ರಹ್ಮಕುಮಾರಿ ಎಂದು ಬರೆಯಬೇಡಿರಿ. ಆದರೆ ದೊಡ್ಡ ದೊಡ್ಡ ಅಕ್ಷರಗಳಲ್ಲಿ ರತನ್ಮೋಹಿನಿ ಎಂದು ಬರೆದರೆ ಅವರದೇ ಎಂದು ತಿಳಿದುಕೊಳ್ಳುವರು. ಇಲ್ಲದಿದ್ದರೆ ಈಶೂನ ಬಳಿ ತುಂಬಾ ಪೋಸ್ಟ್ ಬಂದು ಬಿಡುತ್ತವೆ. ಎಷ್ಟು ವಿಶೇಷ ಆತ್ಮರು ತಮ್ಮ ವಿಶೇಷತೆಯನ್ನು ಪ್ರದರ್ಶಿಸುತ್ತಾರೆ ಎನ್ನುವುದನ್ನು ನೋಡುತ್ತಾರೆ ಲೌಕಿಕದಲ್ಲಿಯೂ ಮಗು ಹುಟ್ಟಿದರೆ ಸದಾ ಜೀವಿಸಿರು, ದೀರ್ಘಾಯುಸ್ಸುಳ್ಳವನಾಗು, ಚಿರಂಜೀವಿಯಾಗೂ ಎಂದು ಆಶೀರ್ವಾದ ಮಾಡುತ್ತಾರೆ. ಹಾಗೆಯೇ ಬಾಪ್‌ದಾದಾರವರೂ ಸಹ ವಿಶೇಷ ಆತ್ಮರ ಅವಿನಾಶೀ ವಿಶೇಷತೆಯನ್ನು ನೋಡಲು ಬಯಸುತ್ತಾರೆ. ಸ್ವಲ್ಪ ಸಮಯದ ವಿಶೇಷತೆಯನ್ನಲ್ಲ. ಒಂದು ವರ್ಷ ನಡೆಯುವುದು, ಎರಡು ವರ್ಷ ನಡೆಯುವುದಲ್ಲ ಅವಿನಾಶಿಯಾಗಿರುವವರಿಗೇ ಅವಿನಾಶೀ ಪ್ರಾಲಬ್ಧವು ಪ್ರಾಪ್ತಿಯಾಗುತ್ತದೆ. ಹೀಗೆ ಮಾತೆಯರು ಸಹ ಪಕ್ಕಾ ಆಗಿದ್ದೀರಾ? ಹೊಸದಾಗಿ ಬಂದಿರುವಂತಹ ಮಾತೆಯರೂ ಪಕ್ಕಾ ಆಗಿದ್ದೀರಾ? ಪಕ್ಕಾ ಆಗಿದ್ದಿರೋ ಅಥವಾ ಕಚ್ಚಾ ಆಗಿದ್ದೀರೋ - ಏನಾಗಿದ್ದೀರಿ? ಪಕ್ಕಾ ಆಗಿದ್ದೇವೆ ಎಂದು ಜೋರಾಗಿ ಹೇಳಿರಿ. ಏಕೆಂದರೆ ನೀವು ಒಂದು ವರ್ಷದ ಮಗುವಾಗಿರಬಹುದು ಅಥವಾ ಎರಡು ವರ್ಷದ ಮಗು ಆಗಿರಬಹುದು. ಅಥವಾ ನಾಲ್ಕು ವರ್ಷದವರಾಗಿರಬಹುದು. ಆದರೆ ಸಮಾಪ್ತಿಯಂತೂ ಒಂದೇ ಸಮಯದಲ್ಲಿ ಆಗುತ್ತದೆಯಲ್ಲವೇ. ವಿನಾಶವಂತೂ ಒಟ್ಟಿಗೆ ಎಲ್ಲರದೂ ಆಗುತ್ತದೆಯಲ್ಲವೇ. ಅಥವಾ ನಾವಂತೂ ಎರಡು ವರ್ಷದವರಾಗಿದ್ದೇವೆ. ನಮ್ಮದು ಸಿಲ್ವರ್ ಜೂಬಿಲಿ ಆಗಿ ಬಿಡಲಿ ಆಮೇಲೆ ವಿನಾಶವಾಗಲಿ ಎಂದು ನೀವು ಹೇಳುತ್ತಿರೋ. ಇದಂತೂ ಆಗುವುದಿಲ್ಲ ತಾನೇ ಆದ್ದರಿಂದ ಹಿಂದೆ ಬಂದವರು ಇನ್ನೂ ಮುಂದೆ ಹೋಗಬೇಕು. ಸ್ವಲ್ಪ ಸಮಯದಲ್ಲಿ ತುಂಬಾ ಸಂಪಾದನೆ ಮಾಡಿಕೊಳ್ಳಲು ಸಾಧ್ಯವಿದೆ. ಇಷ್ಟಾದರೂ ನಿಮಗೆ ಪುರುಷಾರ್ಥದ ಸಲುವಾಗಿ ಸಮಯವು ದೊರೆತಿದೆ. ಮುಂದೆ ಹೋದಂತೆ ಇಷ್ಟು ಸಮಯವೂ ದೊರೆಯುವುದಿಲ್ಲ. ಈಗ ವೇಳೆ ಮೀರಿದೆ ಎನ್ನುವ ಬೋರ್ಡ್ ಹಾಕಲ್ಪಟ್ಟಿದೆ. ಆದರೆ ಅತಿ ತಡವಾಗಿದೆ ಎನ್ನುವ ಬೋರ್ಡ್ ಇನ್ನೂ ಹಾಕಲ್ಪಟ್ಟಿಲ್ಲ. ಆದ್ದರಿಂದ

ನೀವೆಲ್ಲರೂ ಅದೃಷ್ಟಶಾಲಿಯಾಗಿದ್ದೀರಿ. ಕೇವಲ ನಿಮ್ಮ ಭಾಗ್ಯವನ್ನು ಸ್ಮೃತಿಯಲ್ಲಿ ಇಟ್ಟುಕೊಂಡು ಮುನ್ನಡೆಯುತ್ತಾ ಹೋಗಿರಿ ಯಾವುದೇ ಮಾತಿನಲ್ಲಿ ಹೋಗಬೇಡಿ.

ಇಂದು ಬಾಪ್‌ದಾದಾರವರು ಮಕ್ಕಳ ಪುರುಷಾರ್ಥದ ಸಮಯವು ಏಕೆ ವ್ಯರ್ಥವಾಗಿ ಕಳೆದು ಹೋಗುತ್ತದೆ ಎನ್ನುವುದನ್ನು ನೋಡುತ್ತಿದ್ದಾರೆ. ಯಾರೂ ವ್ಯರ್ಥವಾಗಲಿ ಎಂದು ಬಯಸುವುದಿಲ್ಲ. ನನ್ನ ಸಮಯವು ಸಫಲವಾಗಲಿ ಎಂದೇ ಎಲ್ಲರೂ ಬಯಸುತ್ತಾರೆ ಆದರೆ ಮಧ್ಯೆ ಮಧ್ಯೆ ಒಮ್ಮೊಮ್ಮೆ ಅರ್ಧ ಘಂಟೆ, ಒಮ್ಮೊಮ್ಮೆ 15 ನಿಮಿಷ, ಒಮ್ಮೊಮ್ಮೆ 4 ನಿಮಿಷ ವ್ಯರ್ಥವಾಗಿ ಕಳೆದು ಹೋಗಿ ಬಿಡುತ್ತದೆ ಅದರ ಕಾರಣವು ಏನಾಗಿದೆ? ಈ ದಿನ ಬಾಪ್‌ದಾದಾರವರು ಏನು ನೋಡಿದರೆಂದರೆ ಮೆಜಾರಿಟಿ ಮಕ್ಕಳ ವಿಶೇಷ ಪುರುಷಾರ್ಥವು ಏನು ಕಡಿಮೆಯಾಗುತ್ತದೆಯೋ ಅಥವಾ ಮಂದಗತಿಯದಾಗುತ್ತದೆಯೋ ಅದಕ್ಕೆ ಮೂರು ಕಾರಣಗಳಿವೆ ಮುಂಚೆಯೂ ತಿಳಿಸಿಕೊಟ್ಟಿದ್ದಾರೆ. ಇದೇನೂ ಹೊಸ ವಿಚಾರವಲ್ಲ ಆದರೆ, ಡೈಮಂಡ್ ಜೂಬ್ಲಿಯಲ್ಲಿ ವಿಶೇಷವಾಗಿ ಏನು ಗಮನ ಕೊಡಬೇಕೋ ಅದನ್ನು ಬಾಪ್ ದಾದಾರವರು ಮುಂಚಿತವಾಗಿಯೇ ಹೇಳುತ್ತಾ ಇದ್ದಾರೆ ಮೂರು ಕಾರಣಗಳು ಏನಾಗಿದೆಯೆಂದರೆ - ಮೊದಲನೆಯದಾಗಿ ನಡೆಯುತ್ತಾ ನಡೆಯುತ್ತಾ ಶ್ರೀಮತದ ಜೊತೆಯಲ್ಲಿ ಆತ್ಮರ ಪರಮತವನ್ನು ಬೆರಕೆ ಮಾಡಿಬಿಡುತ್ತಾರೆ. ಯಾರಾದರೂ ಏನಾದರೂ ಹೇಳಿದರೆ, ಹೇಳುವವರು ಒಳ್ಳೆಯ ಸತ್ಯವಾದ ಮಹಾರಥಿಯಾಗಿದ್ದರೆಂದು ನೀವು ತಿಳಿದುಕೊಳ್ಳುತ್ತೀರಿ. ಹಾಗೂ ನಿಮಗೆ ಅವರಲ್ಲಿ ವಿಶ್ವಾಸವೂ ಇದೆ. ಯಾವಾಗ ಇಂತಹ ಆತ್ಮನು ಯಾರಾದರೂ ನಿಮಗೆ ಏನಾದರೂ ಅಂತಹ ಸಂಗತಿಗಳನ್ನು ತಿಳಿಸುತ್ತಾರೆ. ಅದರಲ್ಲಿ ನಿಮಗೆ ಆಸಕ್ತಿಯೂ ಉಂಟಾಗುತ್ತದೆ ಸಮಾಚಾರವಂತೂ ಒಳ್ಳೆಯದಾಗಿದೆ. ಪ್ರಪಂಚದ ಸಮಾಚಾರ ಹೇಗೆ ಚೆನ್ನಾಗಿದೆಯೆನಿಸುತ್ತದೆಯೋ ಹಾಗೆಯೇ ಬ್ರಾಹ್ಮಣ ಆತ್ಮರ ಸಮಾಚಾರವೂ ಸಹ ಕೇಳಲು ಚೆನ್ನಾಗಿದೆ ಎನ್ನಿಸುತ್ತದೆ. ಆದ್ದರಿಂದ ನೀವು ಅವರ ಬಗ್ಗೆ ನಂಬಿಕೆಯಿಟ್ಟು ಆ ಸುದ್ದಿಯನ್ನು ನಿಮ್ಮ ಮನಸ್ಸಿನೊಳಗೆ ತುಂಬಿಕೊಳ್ಳುತ್ತೀರಿ. ಅವರು ಹೇಳುವುದಕ್ಕೆ ಅಡ್ಡಿ ಮಾಡುವುದಿಲ್ಲ. ಕೇಳಿ ಮನಸ್ಸಿನಲ್ಲಿ ಇಟ್ಟುಕೊಂಡರೆ ಆ ಸಂಗತಿಯು ಸತ್ಯವೂ ಆಗಿರಬಹುದು. ಎಲ್ಲಾ ಸಮಾಚಾರಗಳೂ ಸುಳ್ಳಾಗಿರುವುದಿಲ್ಲ. ಸತ್ಯವಾದವೂ ಇರುತ್ತದೆ ಆದರೆ ತಂದೆಯ ಆದೇಶವು ಏನಿದೆ ಇಂತಹ ಸಮಾಚಾರವನ್ನು ಕೇಳಲು ಅಡ್ಡಿಯಿಲ್ಲ ಎಂದು ಹೇಳುತ್ತೇವೇನು? ಇಲ್ಲ ಯಾವುದರೊಂದಿಗೆ ನಿಮಗೆ ಏನೂ ಸಂಬಂಧವಿಲ್ಲವೋ. ಕೇವಲ ಮನೊರಂಜನೆ ಮಾಡುವ ಸಮಾಚಾರ ಆಗಿದೆಯೋ, ನೀವು ಅದರ ಬಗ್ಗೆ ಏನನ್ನೂ ಮಾಡಲು ಸಾಧ್ಯವಿಲ್ಲವೋ ಅದನ್ನು ಕೇಳಿ ಏನೂ ಮಾಡಲು ಸಾಧ್ಯವಿಲ್ಲದಿದ್ದರೆ ಸಮಾಚಾರವು ಎಲ್ಲಿಗೆ ಹೋಗುವುದು, ಬುದ್ಧಿಯಲ್ಲಿಯಂತೂ ಧಾರಣೆಯಾಯಿತು ಸಮಯವು ವ್ಯರ್ಥವಾಯಿತೋ ಇಲ್ಲವೋ? ಹಾಗೂ ತಂದೆಯ ಶ್ರೀಮತದಲ್ಲಿ ಪರಮತವನ್ನು ಏಕೆ ಬೆರಕೆ ಮಾಡಿದಿರಿ? ಏಕೆಂದರೆ ತಂದೆಯ ಆಜ್ಞೆಯು ಏನಿದೆಯೆಂದರೆ - ಕೇಳುತ್ತಿದ್ದರೂ ಕೇಳಬೇಡಿರಿ ಎಂದು ಆದ್ದರಿಂದ ನೀವು ಏಕೆ ಕೇಳಿದಿರಿ? ಅದರ ಅಭ್ಯಾಸ ಮಾಡಿಕೊಂಡಿರಿ. ಯಾರಾದರೂ ಒಂದುಸಲ ನಿಮಗೆ ಸಮಾಚಾರವನ್ನು ಹೇಳಿದರೂ, ನಿಮಗೂ ಅದು ತುಂಬಾ ಚೆನ್ನಾಗಿದೆ ಎನ್ನಿಸಿತು. ಹೊಸ ಸಂಗತಿಯಾಗಿದೆ. ಹೀಗೂ ಆಗುತ್ತದೆ ಎನ್ನುವುದು ಗೊತ್ತಾಗಿ ಬಿಟ್ಟಿತು. ಆದರೆ ಒಂದುವೇಳೆ ಒಂದು ಸಲ ನೀವು ಅವರ ಮಾತನ್ನು ಕೇಳಿದರೆ, ಇನ್ನೊಂದು ಸಲ ಅವರು ಎಲ್ಲಿಗೆ ಹೋಗುವರು? ನಿಮ್ಮ ಬಳಿಯೇ ಬರುವರು. ನೀವು ಅವರ ಪಾಲಿಗೆ ಕಸದ ಡಬ್ಬಿ ಆಗಿಬಿಟ್ಟಿರಲ್ಲವೇ ಅಂತಹ ಸಮಾಚಾರಗಳು, ಏನಿದ್ದರೂ ಅವರು ನಿಮ್ಮ ಬಳಿಯೇ ಬಂದು

ತಿಳಿಸುವರಲ್ಲವೇ. ಏಕೆಂದರೆ ನೀವು ಕೇಳುವಿರಿ ಆದ್ದರಿಂದ ಅವರಿಗೆ ನೀವು ತಿಳುವಳಿಕೆ ನೀಡಿ ಅಂತಹ ಹವ್ಯಾಸಗಳಿಂದ ಅವರನ್ನೂ ಮುಕ್ತರನ್ನಾಗಿ ಮಾಡಿರಿ ಅವರು ಹೇಳುವುದನ್ನು ಕೇಳಿ ಆಸಕ್ತಿಯನ್ನು ದ್ವಿಗುಣಗೊಳಿಸಬೇಡಿರಿ. ಆದರೆ ಒಂದುವೇಳೆ ಕೇಳಿದ ಮೇಲೆ ಏನಾದರೂ ಮಾಡಲು ಸಾಧ್ಯವಿದ್ದರೆ ಮಾಡಿರಿ. ಅಥವಾ ನಿಮ್ಮಲ್ಲಿ ಅಷ್ಟು ಶಕ್ತಿಯಿದ್ದರೆ ಅವುಗಳಿಗೂ ಸದಾ ಕಾಲದವರೆಗೆ ಫುಲ್ ಸ್ಟಾಪ್ ಹಾಕಿಬಿಡಿ. ನಿಮ್ಮ ಅಂತರ್ಯದಲ್ಲಿಯೂ ಸಹ ಫುಲ್ ಸ್ಟಾಪ್ ಹಾಕಿರಿ. ಸಂಪೂರ್ಣವಾಗಿ ಆ ವ್ಯಕ್ತಿಯಿಂದ, ದೃಷ್ಟಿಯಿಂದ ಸಮಾಚಾರವನ್ನು ಕೇಳುವ ಆತ್ಮನ ಬಗ್ಗೆ ಸಂಕಲ್ಪದಲ್ಲಿಯೂ ಅಸಹ್ಯ ಭಾವನೆ ಇಬಾರದು. ನಿಮ್ಮಲ್ಲಿ ಇಷ್ಟು ಶಕ್ತಿಯಿದ್ದರೆ, ಇದು ಕೇಳುವುದಾಗಲಿಲ್ಲ, ಅವರ ಕಲ್ಯಾಣ ಮಾಡಿದಂತಾಯಿತು. ಆದರೆ ಫಲಿತಾಂಶದಲ್ಲಿ ಏನು ನೋಡಲಾಗುತ್ತದೆಯೆಂದರೆ, ಮೆಜಾರಿಟಿ  ಮಕ್ಕಳು ಸ್ವಲ್ಪ ಸ್ವಲ್ಪ ಕಸವನ್ನು ತುಂಬಿಕೊಳ್ಳುತ್ತಾ ತುಂಬಿಕೊಳ್ಳುತ್ತಾ ಅಸಹ್ಯ ಭಾವವು ಉತ್ಪನ್ನವಾಗಿ ಬಿಡುತ್ತದೆ ಅಥವಾ ನಡೆ-ನುಡಿಯಲ್ಲಿ ವ್ಯತ್ಯಾಸವಾಗಿ ಬಿಡುತ್ತದೆ. ಬೇರೆ ಏನೂ ಆಗದಿದ್ದರೂ ಆ ಆತ್ಮನ ಬಗ್ಗೆ ಸೇವೆ ಮಾಡುವ ಭಾವನೆಯಿರುವುದಿಲ್ಲ. ಭಾರೀತನವಿರುತ್ತದೆ. ಇದನ್ನು ಶ್ರೀಮತದಲ್ಲಿ ಪರಮತವನ್ನು ಬೆರಕೆ ಮಾಡುವುದೆಂದು ಕರೆಯಲಾಗುತ್ತದೆ. ಸ್ಪಷ್ಟವಾಯಿತೇ? ಏನಾಗುತ್ತದೆಯೆಂದರೆ ಸಮಾಚಾರವನ್ನೇನೋ ಬಾಪ್‌ದಾದಾರವರೂ ಕೇಳುತ್ತಾರೆ. ಮೆಜಾರಿಟಿಯ ಭಾವವು ಬದಲಾವಣೆಯಾಗಿ ಬಿಡುತ್ತದೆ. ಹೇಳುವುದರಲ್ಲಿಯೂ ಭಾವವು ಬದಲಾಗಿ ಬಿಡುತ್ತದೆ. ಒಬ್ಬರು ಬಂದು ಇವರಿಬ್ಬರೂ ಮಾತನಾಡುತ್ತಿದ್ದುದನ್ನು ನಾನು ನೋಡಿದೆನೆಂದು ಹೇಳುತ್ತಾರೆ ಹಾಗೂ ಒಬ್ಬರು ಹೇಳಿದುದನ್ನು ಕೇಳಿ ಇನ್ನೊಬ್ಬರು ಹೇಳುತ್ತಾರೆ - ಇಲ್ಲ ಅವರು ನಿಂತುಕೊಂಡೂ ಇದ್ದರು ಹಾಗೂ ತುಂಬಾ ಒಳ್ಳೆಯ ತರಹವಾಗಿ ನಿಂತುಕೊಂಡಿರಲಿಲ್ಲ. ಇದು ಇನ್ನೊಂದು ಸೇರ್ಪಡೆ ಆಯಿತು. ಆಮೇಲೆ ಮೂರನೆಯವರು ಏನು ಹೇಳುತ್ತಾರೆಂದರೆ - ಇವರದಂತೂ ಇದು ಇದ್ದೇ ಇರುತ್ತದೆ ಎಂದು. ಭಾವವು ಎಷ್ಟು ಬದಲಾಗಿ ಬಿಟ್ಟಿತು. ಅವರ ಭಾವನೆಯು ಏನಿರುತ್ತದೆ ಹಾಗೂ ಮಾತುಗಳಲ್ಲಿ ಭಾವವು ಎಷ್ಟು ಬದಲಾಗಿ ಬಿಡುತ್ತದೆ. ಹೀಗೆ ಈ ಪರಮತವು ವಾಯುಮಂಡಲವನ್ನು ಕಲುಷಿತ ಮಾಡಿಬಿಡುತ್ತದೆ. ಹೀಗೆ ಸಮಯವು ಏನು ವ್ಯರ್ಥವಾಗುತ್ತದೆಯೋ ಅದರ ಒಂದು ಕಾರಣವು ಪರಮತವಾಗಿದೆ. ಹಾಗೂ ಎರಡನೆಯ ಕಾರಣವು ಪರಚಿಂತನೆಯಾಗಿದೆ ಒಬ್ಬರಿಂದ ಏನಾದರೂ ಸಮಾಚಾರವನ್ನು ಕೇಳಿದರೆ, ಎಂಟು-ಹತ್ತು ಮಂದಿಗೆ ಹೇಳದಿರುವುದು ಅಸಂಭವ ಒಂದುವೇಳೆ ಯಾರದರೂ ದೂರದೇಶದಲ್ಲಿದ್ದರೂ ಸಹ ಅವರಿಗೆ ಇಲ್ಲಿ ತುಂಬಾ ಹೊಸ ಘಟನೆಯು ನಡೆದಿದೆ ನೀವು ಬಂದರೆ ಅವಶ್ಯವಾಗಿ ತಿಳಿಸುವೆನು ಎಂದು ಪತ್ರದಲ್ಲಿಯೂ ಬರೆದು ಬಿಡುವರು. ಆದ್ದರಿಂದ ಇದು ಏನಾಗಿಬಿಟ್ಟಿತು? ಪರಚಿಂತನೆ ನೀವು ನಾಲ್ಕು ಮಂದಿಗೆ ತಿಳಿಸಿದರೆ ಆ ನಾಲ್ವರ ಭಾವನೆಯನ್ನು ಆ ಆತ್ಮನ ಬಗ್ಗೆ ನಿವು ಕೆಡಿಸಿಬಿಟ್ಟಿರಲವೇ ಹಾಗೂ ಪರಚಿಂತನೆಯು ಪ್ರಾರಂಭವಾದರೆ ಇದರ ಗತಿಯು ತುಂಬಾ ತೀವ್ರವಾಗಿಯೂ ಇರುತ್ತದೆ ಹಾಗೂ ದೀರ್ಘಕಾಲದ್ದೂ ಆಗಿರುತ್ತದೆ .

ಪರಚಿಂತನೆ ಎಂಬುದು   ಒಂದೆರೆಡು ಸೆಕೆಂಡಿನಲ್ಲಿ ಪೂರ್ತಿಯಾಗುವುದಿಲ್ಲ ಹೇಗೆ ಬಾಪ್‌ದಾದಾರವರು ಹೇಳುತ್ತಾರಲ್ಲವೇ ಯಾರಿಗಾದರೂ ಜ್ಞಾನವನ್ನು ತಿಳಿಸಿಕೊಟ್ಟರೆ ಅವರಿಗೆ ಆಸಕ್ತಿಯನ್ನುಂಟು ಮಾಡುವ ಸಲುವಾಗಿ ಅದನ್ನು ಕಥೆಯ ರೂಪದಲ್ಲಿ ಹೇಳಿರಿ ಎಂದು ಮೊದಲು ಇದು ಆಯಿತು ಆಮೇಲೆ ಏನಾಯಿತು. ಆಮೇಲೆ ಏನಾಯಿತು ಎಂದು ಹೇಳುತ್ತೀರಿ ಹಾಗೆಯೇ ಈ ಕಥೆಯೂ ಸಹ ತುಂಬಾ ದೀರ್ಘವಾಗಿದೆ ಬಾಪ್‌ದಾದಾರಂತೂ ಸರ್ವರ ಮನಸ್ಸಿನ

ವಿಚಾರಗಳನ್ನು ಕೇಳಿಯೂ ಕೇಳುತ್ತಾರೆ. ನೋಡಿಯು ನೋಡುತ್ತಾರೆ. ಯಾರು ಎಷ್ಟೇ ಬಚ್ಚಿಟ್ಟುಕೊಳ್ಳಲು ಪ್ರಯತ್ನ ಮಾಡಿದರೂ ಕೇವಲ ಬಾಪ್‌ದಾದಾರವರು ಒಮ್ಮೊಮ್ಮೆ ಲೋಕ ಸಂಗ್ರಹಾರ್ಥವಾಗಿ ಬಹಿರಂಗವಾಗಿ ಹೇಳುವುದಿಲ್ಲ. ಆದರೆ ಎಲ್ಲವನ್ನೂ ನೋಡುತ್ತಾರೆ, ಎಲ್ಲವನ್ನೂ ತಿಳಿದುಕೊಳ್ಳುತ್ತಾರೆ. ನಾನಂತೂ  ಮಾಡುವುದಿಲ್ಲ ಎಂದು ಯಾರು ಎಷ್ಟೇ ಹೇಳಿದರೂ ಸಹ ಬಾಪ್‌ದಾದಾರವರ ಬಳಿ ರೆಜಿಸ್ಟರ್ (ಕರ್ಮಗಳ ಖಾತೆ) ಇದೆ. ಯಾರು ಏನೇನು ಮಾಡಿದರು, ಎಷ್ಟು ಸಲ ಮಾಡಿದರು, ಯಾವ ಸಮಯದಲ್ಲಿ ಮಾಡಿದರು, ಎಷ್ಟು ಮಂದಿಯೊಂದಿಗೆ ಮಾಡಿದರು ಎನ್ನುವುದೆಲ್ಲದರ ರಜಿಸ್ಟರ್ ಇರುತ್ತದೆ. ಆದರೂ ಅಲ್ಲಲ್ಲಿ ನಿಶ್ಶಬ್ಧವಾಗಿ ಇರಬೇಕಾಗುತ್ತದೆ ಅಷ್ಟೇ.  ಎರಡನೇ ವಿಷಯ - ಪರಚಿಂತನೆ. ಅವರಿಗೆ ಯಾವಾಗಲೂ ಸ್ವಚಿಂತನೆ ನಡೆಯುವುದಿಲ್ಲ. ಪರಚಿಂತನೆ ಮಾಡುವವರು ಯಾವ ವಿಷಯ ನಡೆದರೂ ತಮ್ಮ ತಪ್ಪನ್ನು ಕೂಡ ಇತರರ ಮೇಲೆ ಇಟ್ಟುಬಿಡುತ್ತಾರೆ  ಮತ್ತು ಪರಚಿಂತನೆ ಮಾಡುವವರು ವಿಷಯಗಳನ್ನು ತಯಾರು ಮಾಡುವುದರಲ್ಲಿ ನಂಬರ್‌ವನ್‌ನ್ನಾಗಿ ಇರುತ್ತಾರೆ. ಅವರ ತಪ್ಪನೆಲ್ಲಾ ಇತರರ ಮೇಲೆ ಇಟ್ಟು ಕೇಳುವವರು ಕೂಡ ನಿಶ್ಶಬ್ದವಾಗುವಂತೆ ಪ್ರಮಾಣೀಕರಿಸುತ್ತಾರೆ.  ಆದ್ದರಿಂದ ಕೇವಲ ಜ್ಞಾನದ ಪಾಯಿಂಟನ್ನು ಹೇಳುವುದು,  ಕೇಳುವುದನ್ನು ಸ್ವಚಿಂತನೆಯೆಂದು ಕರೆಯುವುದಿಲ್ಲ. ಕೇವಲ ಇದೇ ಸ್ವಚಿಂತನೆಯಲ್ಲ ಆದರೆ ಸ್ವಚಿಂತನೆ ಅರ್ಥಾತ್ ನಿಮ್ಮ ಸೂಕ್ಷ್ಮವಾದ ಲೋಪ, ದೋಷಗಳನ್ನು, ಸಣ್ಣಪುಟ್ಟ ತಪ್ಪುಗಳನ್ನು ದೌರ್ಬಲ್ಯಗಳನ್ನು ಚಿಂತನೆ ಮಾಡಿ ನಿರ್ಮೂಲ ಮಾಡುವುದಾಗಿದೆ. ಪರಿವರ್ತನೆ ಮಾಡಿಕೊಳ್ಳುವುದೇ ಸ್ವಚಿಂತನೆಯಾಗಿದೆ. ಬಾಕಿ ಜ್ಞಾನವನ್ನು ಕೇಳುವುದು ಹಾಗೂ ಹೇಳುವುದರಲ್ಲಿಯಂತೂ ಎಲ್ಲರೂ ಬುದ್ಧಿವಂತರಾಗಿದ್ದೀರಿ ಅದು ಜ್ಞಾನದ ಚಿಂತನೆಯಾಗಿದೆ. ಮನನವಾಗಿದೆ. ಆದರೆ ಸ್ವಚಿಂತನೆಯ ಸೂಕ್ಷ್ಮವಾದ ಅರ್ಥವು ನಿಮ್ಮ ಬಗ್ಗೆ ಆಗಿದೆ. ಏಕೆಂದರೆ, ಯಾವಾಗ ಫಲಿತಾಂಶವು ಪ್ರಕಟವಾಗುವುದೋ ಆಗ ಇವರು ಜ್ಞಾನದ ಮನನವನ್ನು ಚೆನ್ನಾಗಿ ಮಾಡಿದರೇನು ಅಥವಾ ಸೇವೆಯಲ್ಲಿ ಜ್ಞಾನವನ್ನು ಚೆನ್ನಾಗಿ ಉಪಯೋಗ ಮಾಡಿದರೇ ಎಂಬುದನ್ನು ಫಲಿತಾಂಶದಲ್ಲಿ ಗಮನಿಸುವುದಿಲ್ಲ. ಈ ಫಲಿತಾಂಶಕ್ಕೆ ಮುಂಚೆ ಸ್ವಚಿಂತನೆ ಮಾಡಬೇಕು ಹಾಗೂ ಪರಿವರ್ತನೆ ಮಾಡಿಕೊಳ್ಳಬೇಕು. ಸ್ವಚಿಂತನೆ ಮಾಡುವುದರ ಅರ್ಥವೇ ಪರಿವರ್ತನೆ ಮಾಡಿಕೊಳ್ಳುವುದಾಗಿದೆ. ಕೇವಲ ಚಿಂತನೆಯಲ್ಲ - ನನ್ನಲ್ಲಿ ಈ ಅವಗುಣವಿದೆ. ಈ ಲೋಪ, ದೋಷವಿದೆ, ಇರುವುದೇನೋ ಇದೆ. ಆದರೆ ಕೇವಲ ವಿಚಾರ ಮಾಡುವುದು ಸ್ವಚಿಂತನೆಯಲ್ಲ, ಸ್ವಚಿಂತನೆ ಅರ್ಥಾತ್ ಪರಿವರ್ತನೆ, ಹೀಗೆ ಫಲಿತಾಂಶದಲ್ಲಿ ಬಾಪ್‌ದಾದಾರವರು ತಿಳಿಸಿಕೊಡುವುದೇನೆಂದರೆ ಯಾವಾಗ ಅಂತಿಮ ಫಲಿತಾಂಶವು ಪ್ರಕಟವಾಗುವುದೋ ಅದರಲ್ಲಿ ಮೊದಲು ಅಂಕಗಳು ನಿತ್ಯ ಜೀವನದಲ್ಲಿ (ಪ್ರಾಕ್ಟಿಕಲ್) ಧಾರಣಾ ಸ್ವರೂಪ ಆಗಿರುವುದಕ್ಕೇ ದೊರೆಯುತ್ತವೆ. ಯಾರು ಧಾರಣಾ ಸ್ವರೂಪ ಆಗಿರುವರೋ ಅವರು ಸ್ವತಹವಾಗಿ ಯೋಗಿಯಾಗಿಯೇ ಇರುವರು. **ಒಂದುವೇಳೆ ಅಧಿಕ ಮಾರ್ಕ್ಸ್ (ಅಂಕಗಳನ್ನು) ತೆಗೆದುಕೊಳ್ಳಬೇಕೆಂದಿದ್ದರೆ ಮೊದಲು ಅನ್ಯರಿಗೆ ಏನನ್ನಾದರೆ ತಿಳಿಸಿಕೊಡುತ್ತೀರೋ ಅದರ ಧಾರಣಾ ಸ್ವರೂಪರಾಗಿರಿ. ಈಗಿನ ಸಮಯದಲ್ಲಿ ಭಾಷಣವನ್ನು ಯಾವ ವಿಷಯದ ಬಗ್ಗೆ ಮಾಡುತ್ತೀರಿ? ಮೌಲ್ಯಗಳ ಬಗ್ಗೆ ಮಾಡುತ್ತೀರಿ. ಹೀಗೆ ಅನ್ಯರಿಗೆ ಮೌಲ್ಯಗಳ ಬಗ್ಗೆ ಏನು ತಿಳಿಸಿ ಕೊಡುತ್ತೀರೋ ಅದರ ಪರಿಶೀಲನೆಯನ್ನು ನಿಮ್ಮಲ್ಲಿ ಮಾಡಿಕೊಳ್ಳಿರಿ. ಮೊದಲು ಸೇವೆಗೆ ಅಂಕಗಳು ಇರುತ್ತವೆ. ಆದರೆ ಧಾರಣಾ ಸ್ವರೂಪದ ಒಂದು ಅಂಕವು ಸೇವೆಯ ಹತ್ತು ಅಂಕಗಳ  ಸರಿಸಮಾನವಾಗಿರುತ್ತದೆ.** ಒಂದುವೇಳೆ ನೀವು

ಜ್ಞಾನವನ್ನು ತಿಳಿಸಿಕೊಡಲು ಸಾಧ್ಯವಿಲ್ಲದಿದ್ದರೂ ನಿಮ್ಮ ಧಾರಣೆಯಿಂದ ಪ್ರಭಾವವನ್ನು ಬೀರಿದರೆ ನಿಮ್ಮ ಸೇವೆಯ ಮಾರ್ಕ್ಸ್ ಕೂಡಿ ಬರುತ್ತವೆಯಲ್ಲವೇ.

ಈಗಿನ ಸಮಯದಲ್ಲಿ ಅನೇಕರು ಏನು ತಿಳಿದುಕೊಂಡಿದ್ದಾರೆಂದರೆ, ತಮಗೆ ಸೇವೆ ಮಾಡುವ ಅವಕಾಶವು ತುಂಬಾ ಕಡಿಮೆ ದೊರೆಯುತ್ತದೆ ಎಂದು ಸೇವೆಯು ಹೆಚ್ಚು ದೊರೆಯಬೇಕೆಂದು ಬಯಸುತ್ತಾರೆ. ಮೊದಲು ನನಗೆ ಅವಕಾಶವು ದೊರೆಯಬೇಕು. ಅನ್ಯರಿಗೆ ಏಕೆ ಅವಕಾಶವು ದೊರೆಯುತ್ತದೆ? ನನಗೆ ಏಕೆ ದೊರೆಯುವುದಿಲ್ಲ ಎಂದು ಯೋಚಿಸುತ್ತಾರೆ. ಸೇವೆ ಮಾಡುವುದು ತುಂಬಾ ಒಳ್ಳೆಯದಾಗಿದೆ. ಏಕೆಂದರೆ ಒಂದುವೇಳೆ ಬುದ್ದಿಯು ಫ್ರೀಯಾಗಿದ್ದರೆ (ಬಿಡುವಾಗಿದ್ದರೆ) ವ್ಯರ್ಥ ಯೋಚನೆ, ವ್ಯರ್ಥ ಸಂಕಲ್ಪಗಳು ತುಂಬಾ ನಡೆಯುತ್ತವೆ. ಆದ್ದರಿಂದ ಸೇವೆಯಲ್ಲಿ ಬುದ್ಧಿಯು ಬ್ಯುಜಿಯಾಗಿ ಇರಬೇಕು. ಈ ಸಾಧನವು ಉತ್ತಮವಾಗಿದೆ. ಆದರೆ ಯಾವ ಸೇವೆಯು ನಿಮ್ಮನ್ನು ಗಾಬರಿಯಲ್ಲಿ ಸೇವೆ ಮಾಡುವ ಪೇಚಾಟವನ್ನು ತರುತ್ತದೆಯೋ ಅದು ಒಳ್ಳೆಯದಲ್ಲ ಉದಾಹರಣೆಗಾಗಿ ಸೇವೆಯಿರುತ್ತದೆ. ಉತ್ಸಾಹವು ಒಳ್ಳೆಯದೇ ಆಗಿದೆ. ಆದರೆ ವಿಶ್ವನಾಟಕದ ಅನುಸಾರವಾಗಿ ಅಥವಾ ಪರಿಸ್ಥಿತಿಗಳ ಅನುಸಾರವಾಗಿ ನಿಮಗೆ ಅವಕಾಶವು ದೊರೆಯದಿದ್ದರೆ ಹಾಗೂ ಅನ್ಯರ ಸೇವೆ ಮಾಡುವುದಕ್ಕೆ ಬದಲಾಗಿ ನಿಮ್ಮ ಸ್ಥಿತಿಯೂ ಕೆಳಮಟ್ಟಕ್ಕೆ ಬಂದರೆ ಆ ಸೇವೆಯು ಏನಾಯಿತು? ಆ ಸೇವೆಯ ಪ್ರತ್ಯಕ್ಷಫಲವಾಗಿ ಏನು ದೊರೆಯುತ್ತದೆ? ಸತ್ಯವಾದ ಸೇವೆ, ಪ್ರೀತಿಯಿಂದ ಮಾಡುವ ಸೇವೆ ಸರ್ವರ ಆಶೀರ್ವಾದಗಳೊಂದಿಗೆ ಮಾಡುವ ಸೇವೆಯು ಪ್ರತ್ಯಕ್ಷ ಫಲವಾಗಿ ಖುಷಿಯು ಇರುತ್ತದೆ. ಹಾಗೂ ಒಂದುವೇಳೆ ಸೇವೆಯಲ್ಲಿ ಫೀಲಿಂಗ್ ಬಂದುಬಿಟ್ಟರೆ, ಬ್ರಾಹ್ಮರು ಫೀಲಿಂಗನ್ನು ಏನೆಂದು ಕರೆಯುತ್ತೀರಿ? ಫ್ಲೂ, ಫ್ಲೂ ಜ್ವರವುಳ್ಳವರು ಏನು ಮಾಡುತ್ತಾರೆ? ಮಲಗಿಬಿಡುತ್ತಾರೆ. ಊಟವೂ ಮಾಡುವುದಿಲ್ಲ. ಮಲಗಿ ಬಿಡುತ್ತಾರೆ. ಇಲ್ಲಿಯೂ ಸಹ ಫೀಲಿಂಗ್ ಬಂದರೆ ಊಟವನ್ನು ಬಿಟ್ಟು ಬಿಡುತ್ತಾರೆ. ಅಥವಾ ಮುನಿಸಿಕೊಂಡು ಕುಳಿತು ಬಿಡುತ್ತಾರೆ. ಆದ್ದರಿಂದ ಇದು ಫ್ಲೂ ಆಯಿತಲ್ಲವೇ ಒಂದುವೇಳೆ ನೀವು ಸಾಧಾರಣ ಸ್ವರೂಪರಾಗಿದ್ದರೆ, ಸತ್ಯವಾದ ಸೇವಾಧಾರಿ ಆಗಿದ್ದರೆ, ಈಗಿನ ಸಮಯದ ಅನುಸಾರವಾಗಿ ಪ್ರತ್ಯಕ್ಷತೆಯ ಗಣನೆಯಿಂದ ಈಗ ಸೇವೆಯು ನಿಮ್ಮ ಬಳಿ ಬರುವುದು ಆದರೆ ಸ್ವಾರ್ಥದಿಂದ ಸೇವೆ ಮಾಡುವವರಾಗಿರಬಾರದು. ಒಂದು ಕಲ್ಯಾಣದ ಭಾವನೆಯಿಂದ ಸೇವೆ ಮಾಡುವುದಾಗಿದೆ. ಹಾಗೂ ಇನ್ನೊಂದು ಸ್ವಾರ್ಥದಿಂದ ಮಾಡುವ ಸೇವೆಯಾಗಿದೆ. ನನ್ನ ಹೆಸರು. ನನ್ನ ಫೋಟೋ ಸುದ್ದಿ ಪತ್ರಿಕೆಯಲ್ಲಿ ಬಂದು ಬಿಡುವುದು. ರೇಡಿಯೋದಲ್ಲಿ, ಟಿ.ವಿ.ಯಲ್ಲಿ ನನ್ನ ಭಾಷಣವು ಒಂದು ಬಿಡುವುದು. ಬ್ರಾಹ್ಮಣರಲ್ಲಿ ನನ್ನ ಹೆಸರು ಪ್ರಖ್ಯಾತವಾಗಿ ಬಿಡುವುದು ಬ್ರಾಹ್ಮಣಿಯು ನನ್ನನ್ನು ತುಂಬಾ ಮುಂದಿಡುವರು, ಸಲಹೆ ಕೇಳುವರು ಈ ಎಲ್ಲಾ ಭಾವವು ಸ್ವಾರ್ಥ ಸೇವೆಯದಾಗಿದೆ. ಪ್ರಾರಂಭದಲ್ಲಿ ಸ್ಥಾಪನೆಯ ಸಮಯದ ವಾಯುಮಂಡಲವೇ ಬೇರೆ ಇತ್ತು. ಆದರೆ ಈಗ ನೀವು ಸೇವೆಯ ಬೆನ್ನುಹತ್ತಿ ಹೋಗುವುದಲ್ಲ. ನಿಮ್ಮ ಬಳಿ ಸೇವೆಯು ತಾನಾಗಿ ನಡೆದು ಬರುವುದು ಆದ್ದರಿಂದ ಯಾರು ಸತ್ಯವಾದ ಸೇವಾಧಾರಿ ಆಗಿದ್ದಾರೋ ಅವರಿಗೆ ಅನ್ಯ ಯಾವ ಸೇವೆಯೂ ದೊರೆಯದಿದ್ದರೆ, ನಿನ್ನ ಚಹರೆಯಿಂದ, ನಿನ್ನ ನಡುವಳಿಕೆಯಿಂದ ಸೇವೆ ಮಾಡು ಎಂದು ಬಾಪ್‌ದಾದಾರವರು ಹೇಳುತ್ತಾರೆ. ನಿಮ್ಮ ಚೆಹರೆಯು ತಂದೆಯ ಸಾಕ್ಷಾತ್ಕಾರ ಮಾಡಿಸಲಿ. ನಿಮ್ಮ ಚೆಹರೆ, ನಿಮ್ಮ ನಡವಳಿಕೆಯು ತಂದೆಯ ನೆನಪು ತಂದುಕೊಡಲಿ, ಈ ಸೇವೆಯು ನಂಬರ್‌ವನ್ ಆಗಿದೆ. ಸ್ವಾರ್ಥ ಭಾವವಿರದ ಸೇವಾಧಾರಿಯಾಗಿರಿ. ನನಗೇ ಅವಕಾಶವು

ದೊರೆಯಲಿ, ನನಗೇ ದೊರೆಯಬೇಕು. ಏಕೆ ಸಿಗುವುದಿಲ್ಲ, ದೊರೆಯಬೇಕು. ಇಂತಹ ಸಂಕಲ್ಪಗಳನ್ನೂ ಸಹ ಸ್ವಾರ್ಥಪರವೆಂದು ಕರೆಯಲಾಗುತ್ತದೆ. ಬ್ರಾಹ್ಮಣ ಪರಿವಾರದಲ್ಲಿ ನಿಮ್ಮ ಹೆಸರು ಪ್ರಸಿದ್ಧವಾಗಿಲ್ಲದೇ ಇರಬಹುದು. ಆದರೆ ತಂದೆಯ ಬಳಿಯಂತೂ ನಿಮ್ಮ ಹೆಸರು ಇದೆಯಲ್ಲವೇ? ಯಾವಾಗ ತಂದೆಯ ಹೃದಯದಲ್ಲಿ ನಿಮ್ಮ ಹೆಸರಿದೆಯೋ ಆಗ ಇನ್ನೇನು ಬೇಕಾಗಿದೆ. ಹಾಗೂ ಕೇವಲ ತಂದೆಯ ಹೃದಯದಲ್ಲಿ ಅಲ್ಲ. ಆದರೆ ಯಾವಾಗ ಅಂತಿಮದಲ್ಲಿ ಸ್ಥಾನವು ದೊರೆಯುವುದೋ ಆಗ ನಿಮ್ಮ ಸ್ಥಾನವು ಮುಂದೆ ಇರುವುದು. ಏಕೆಂದರೆ ಬಾಪ್‌ದಾದಾರವರು ಲೆಕ್ಕವನ್ನು ಇಡುತ್ತಾರೆ. ನೀವು ಅರ್ಹರಾಗಿದ್ದರೂ ನಿಮಗೆ ಅವಕಾಶವು ದೊರೆಯದಿದ್ದರೆ ಅದೂ ಸಹ ನಿಮ್ಮ ಖಾತೆಯಲ್ಲಿ ಟಿಪ್ಪಣಿ ಮಾಡಲ್ಪಡುತ್ತದೆ. ಹಾಗೂ ಬೇಡಿ ಅವಕಾಶವನ್ನು ತೆಗೆದುಕೊಂಡರೆ ಸೇವೆಯನ್ನೇನೋ ಮಾಡಿದಿರಿ ಆದರೆ ಅಂಕಗಳು ಕಟ್ ಆಗುತ್ತವೆ. ಈ ಧರ್ಮರಾಜನ ಖಾತೆಯೇನೂ ಕಡಿಮೆಯಲ್ಲ, ತುಂಬಾ ಸೂಕ್ತವಾದ ಲೆಕ್ಕಾಚಾರ ಆಗಿದೆ ಆದ್ದರಿಂದ ನಿಸ್ವಾರ್ಥ ಸೇವಾಧಾರಿಯಾಗಿರಿ. ನಿಮ್ಮ ಸ್ವಾರ್ಥವು ಇರಬಾರದು. ಕಲ್ಯಾಣದ ಸ್ವಾರ್ಥವು ಇರಬೇಕು. ಒಂದುವೇಳೆ ನಿಮಗೆ ಅವಕಾಶವು ದೊರೆತರೆ ಹಾಗೂ ಅನ್ಯರು ತಮಗೂ ಅವಕಾಶವು ದೊರೆತರೆ ತುಂಬಾ ಒಳ್ಳೆಯದು ಎಂದು ತಿಳಿದುಕೊಳ್ಳುತ್ತಾರೆ ಹಾಗೂ ಅವರು ಯೋಗ್ಯರೂ ಆಗಿದ್ದರೆ, ನೀವು ಒಂದುವೇಳೆ ನಿಮ್ಮ ಅವಕಾಶವನ್ನು ಅವರಿಗೆ ಕೊಟ್ಟುಬಿಟ್ಟರೂ ಅದರಲ್ಲಿ ನಿಮ್ಮ ಪಾಲೂ ಜಮಾ ಆಗಿಬಿಡುತ್ತದೆ ನೀವು ಸೇವೆ ಮಾಡದಿದ್ದರೂ ಯಾರಿಗಾದರೂ ಅವಕಾಶವನ್ನು ಕೊಟ್ಟರೆ ಅದರಲ್ಲಿಯೂ ನಿಮ್ಮ ಪಾಲು ಜಮಾ ಆಗುತ್ತದೆ. ಏಕೆಂದರೆ ಸತ್ಯವಾದ ವಜ್ರ ಆಗಬೇಕಲ್ಲವೇ. ಆದ್ದರಿಂದ ಲೆಕ್ಕವನ್ನೂ ಸಹ ತಿಳಿದುಕೊಂಡು ಬಿಡಿ. ಸರಿಯಾಗಿದೆ. ಆಗಿಬಿಟ್ಟಿತು ಎಂದು ಅಜಾಗರೂಕರಾಗಬೇಡಿರಿ. ಸೂಕ್ತವಾಗಿದೆ. ಲೆಕ್ಕದ ಖಾತೆಯು ತುಂಬಾ ಸೂಕ್ತವಾಗಿದೆ. ತಂದೆಯು ಏನೂ ಮಾಡಬೇಕಾಗುವುದಿಲ್ಲ. ಆಟೋಮ್ಯಾಟಿಕ್ಕಾಗಿ ಖಾತೆಯಲ್ಲಿ ಸೇರುತ್ತದೆ. ಒಮ್ಮೊಮ್ಮೆ - ಬಾಪ್‌ದಾದಾರವರು ಮಕ್ಕಳ ಖಾತೆಯನ್ನು ನೋಡಿಯೂ ನೋಡುತ್ತಾರೆ. ಹೀಗೆ ಮೊದಲನೆಯ ಅವಗುಣ ಪರಮತ ಹಾಗೂ ಎರಡನೆಯದಾಗಿ ಪರಚಿಂತನೆಯನ್ನು ತ್ಯಾಗ ಮಾಡಿರಿ.

ಮೂರನೆಯ ವಿಷಯವು ಪರದರ್ಶನವಾಗಿದೆ. ಅನ್ಯರನ್ನು ನೋಡುವುದರಲ್ಲಿ ಮೆಜಾರಿಟಿ ಮಕ್ಕಳು ಬುದ್ಧಿವಂತರಾಗಿದ್ದಾರೆ. ಪರದರ್ಶನ - ಏನು ನೋಡುತ್ತಾರೋ ಅದು ನೋಡಿದ ಮೇಲೆ ಎಲ್ಲಿ ಹೋಗುತ್ತದೆ? ಬುದ್ಧಿಯಲ್ಲಿಯೇ ಹೋಗುತ್ತದೆ. ಯಾರೂ ಯಾರು ಅನ್ಯರನ್ನು ನೋಡುವುದರಲ್ಲಿ ಸಮಯವನ್ನು ಉಪಯೋಗಿಸುತ್ತಾರೋ ಅವರಿಗೆ ತಮ್ಮನ್ನು ನೋಡಿಕೊಳ್ಳಲು ಸಮಯವು ಹೇಗೆ ದೊರೆಯುವುದು? ಬಹಳಷ್ಟು ವಿಷಯಗಳು ಇರುತ್ತವೆ ಅಲ್ಲವೇ! ಆ ವಿಷಯಗಳು ಕೇಳಿಸುತ್ತವೆ ಮತ್ತು ಕಾಣಿಸುತ್ತವೆ ಏಕೆಂದರೆ ಎಷ್ಟು ದೊಡ್ಡ ಸಂಘಟನೆಯಿರುತ್ತದೆಯೋ ಅಷ್ಟು ವಿಷಯಗಳಿರುತ್ತವೆ, ಈ ವಿಷಯಗಳು ಏಕೆ ನಡೆಯುತ್ತಿದವೆ? ಕೆಲವರು ಈ ವಿಷಯಗಳು ಹೀಗಾಗಬಾರದು ಎಂದುಕೊಳ್ಳುತ್ತಿದ್ದಾರೆ. ನಡೆಯಬಾರದು ಎಂದು ತಿಳಿಯುವುದು ಒಳ್ಳೆಯದೇ. ಆದರೆ ಹೀಗಾಗಬಾರದು ಎಂಬ ವಿಷಯದಲ್ಲಿ ನೀವು ಏಕೆ ಸಮಯವನ್ನು ಉಪಯೋಗಿಸುತ್ತಿದ್ದೀರಿ. ಈ ವಿಷಯಗಳೇ ಪರೀಕ್ಷೆ. ಎಷ್ಟು ದೊಡ್ಡ ವಿದ್ಯಾಭ್ಯಾಸವಿದ್ದರೆ ಅಷ್ಟು ದೊಡ್ಡ ಪೇಪರ್ ಕೂಡ ಇರುತ್ತದೆ. ಇಂತಹ ವಾಯುಮಂಡಲವನ್ನು ತಯಾರು ಮಾಡುವುದು ಎಂಬುವುದು ಎಲ್ಲರಿಗೂ ಪರೀಕ್ಷೆ. ಪರಮತ, ಪರಚಿಂತನೆ, ಮತ್ತು ಪರದರ್ಶನದಿಂದ ಎಷ್ಟರವರೆಗೆ ನಿಮ್ಮನ್ನು ನೀವು ರಕ್ಷಿಸಿಕೊಳ್ಳುತ್ತೀರಿ ಎಂಬುದಕ್ಕೆ ಇದು ಪರೀಕ್ಷೆ.

1.ಜವಾಬ್ದಾರಿ ಇರುವ ಕಾರಣ ಕೇಳಬೇಕಾಗಿ ಬರುತ್ತದೆ, ನೋಡಬೇಕಾಗಿ ಬರುತ್ತದೆ, ಅದರಲ್ಲಿ ಕಲ್ಯಾಣಕಾರಿ ಭಾವನನೆಯಿಂದ ಕೇಳಬೇಕು ಮತ್ತು ನೋಡಬೇಕು. ಜವಾಬ್ದಾರಿಯಾದ ಕಾರಣ ಕೇಳುವುದು ಒಳ್ಳೆಯದೇ ಆದರೆ 2. ಸ್ವಸ್ಥಿತಿಯನ್ನು ಏರುಪೇರು ಮಾಡಿಕೊಂಡು ನೋಡುವುದು ಕೇಳುವುದು ಅಥವಾ ಯೋಚಿಸುವುದು ಎಂಬುದು ತಪ್ಪು. ಒಂದು ವೇಳೆ ಅದು ನಿಮ್ಮ ಜವಾಬ್ದಾರಿಯಾಗಿ ಭಾವಿಸಿದರೆ ಆ ಜವಾಬ್ದಾರಿಯ ಮುಂದೆ ನಿಮ್ಮ ಬ್ರೇಕನ್ನು ಶಕ್ತಿಶಾಲಿಯಾಗಿ ಮಾಡಿಕೊಳ್ಳಿರಿ. ಪರ್ವತವನ್ನು ಹತ್ತುವಾಗ ಮೊದಲೇ ಸೂಚನೆಯನ್ನು ಕೊಡುತ್ತಾರಲ್ಲವೇ. ನಿಮ್ಮ ಬ್ರೇಕ್‌ಅನ್ನು ಚೆನ್ನಾಗಿ ಪರಿಶೀಲಿಸಿಕೊಳ್ಳಿರಿ ಎಂದು. ಹಾಗೆಯೇ ಜವಾಬ್ದಾರಿ ಎಂಬುದು ಕೂಡ ಉನ್ನತ ಸ್ಥಿತಿ. ಭಲೇ ಜವಾಬ್ದಾರಿಯನ್ನು ನಿರ್ವಹಿಸಿ, ಆದರೆ ಒಂದು ಕ್ಷಣದಲ್ಲಿ ಬಿಂದುವನ್ನು ಇಡಲಾಗುತ್ತಿದೆಯೇ ಎಂದು ಪರಿಶೀಲಿಸಿಕೊಳ್ಳಿರಿ ಅಥವಾ ಬಿಂದುವು ಇಡಬೇಕೆಂದುಕೊಂಡು ಪ್ರಶ್ನಾರ್ಥಕವನ್ನು ಇಡುತ್ತಿದ್ದೀರಾ? ಅದು ತಪ್ಪು. ಅದರಲ್ಲಿ ಸಮಯ ಮತ್ತು ಶಕ್ತಿ ವ್ಯರ್ಥವಾಗಿ ಬಿಡುತ್ತವೆ ಆದ್ದರಿಂದ ಮೊದಲು ನಿಮ್ಮ ಬ್ರೇಕ್‌ಅನ್ನು ಶಕ್ತಿಶಾಲಿಯಾಗಿ ತಯಾರು ಮಾಡಿಕೊಳ್ಳಿರಿ, ನೋಡಿದ್ದೀರಿ ಅಥವಾ ಕೇಳಿದ್ದೀರಿ, ಎಲ್ಲಿಯವರೆಗೆ ಕಲ್ಯಾಣವನ್ನು ಮಾಡಬೇಕೋ ಮಾಡಿದ್ದೀರಿ ಅಷ್ಟೇ. ಬಿಂದುವನ್ನು ಇಟ್ಟುಬಿಡಬೇಕು ಇಂತಹ ಸ್ಥಿತಿ ಇದ್ದರೆ ಜವಾಬ್ದಾರಿಯನ್ನು ತೆಗೆದುಕೊಳ್ಳಿ. ಇಲ್ಲದಿದ್ದರೆ ನೋಡುತ್ತಲೂ ನೋಡಬೇಡಿರಿ, ಕೇಳುತ್ತಲೂ ಕೇಳಬೇಡಿರಿ, ಸ್ವಚಿಂತನೆಯಲ್ಲಿ ಇರಿ. ಇದರಲ್ಲಿಯೇ ಲಾಭವಿದೆ.

ಆದ್ದರಿಂದ ಇಂದಿನ ಪಾಠವು ಯಾವುದಾಯಿತು? ಪರಮತ, ಪರಚಿಂತನೆ ಹಾಗೂ ಪರದರ್ಶನ ಈ ಮೂರು ದೋಷಗಳಿಂದ ಮುಕ್ತರಾಗಿರಿ ಹಾಗೂ ಒಂದು ವಿಶೇಷತೆಯನ್ನು ಧಾರಣೆ ಮಾಡಿರಿ ಆ ಒಂದು ವಿಶೇಷತೆಯು ಪರೋಪಕಾರಿ ಆಗುವುದಾಗಿದೆ. ಮೂರು ಪ್ರಕಾರದ ಪರವನ್ನು ಸಮಾಪ್ತಿ ಮಾಡಿರಿ ಹಾಗೂ ಒಂದು ಪ್ರಕಾರದ ಪರ ಪರ-ಉಪಕಾರಿ ಆಗಿರಿ. ಆಗುವುದು ಬರುತ್ತದೆಯೇ? ಯಾವ ವಿಷಯಗಳಿಂದ ಮುಕ್ತರಾಗುವಿರಿ? ಮಾತೆಯರು ಏನು ಮಾಡುವಿರಿ? ಮಕ್ಕಳ ಉಪಕಾರಿಯಾಗುವಿರೋ ಅಥವಾ ಪರೋಪಕಾರಿ ಆಗುವಿರೋ? ಸರ್ವರ ಉಪಕಾರಿ ಆಗಿರಿ. ಸಹಜವಾಗಿದೆಯೋ ಅಥವಾ ಕಷ್ಟಕರವಾಗಿದೆಯೋ? ಹೊಸಬರು ಏನೆಂದುಕೊಳ್ಳುತ್ತಿದ್ದೀರಿ ಇದು ಸಹಜವೇ ಅಥವಾ ಕಷ್ಟವೇ ಟೀಚರ್ಸ್ ಹೇಳಿರಿ ಸಹಜವೇ? ಸಹಜವಲ್ಲ ಬಾಪ್‌ದಾದಾ ಕಷ್ಟವೆಂದುಕೊಳ್ಳುತ್ತಿದ್ದಾರೆ. ಬಹಳ ವಿಷಯಗಳು ಇವೆಯಲ್ಲವೇ. ಬಹಳ ಕಷ್ಟವಲ್ಲವೇ. ಈಗ ಇಲ್ಲಿ ಕುಳಿತಿರುವವರು ಒಂದು ವೇಳೆ ಸಹಜ, ಸಹಜ ಎನ್ನುತ್ತಿದ್ದೀರಿ ಹಾಗೂ ರೈಲಿನಿಂದ ಇಳಿಯುತ್ತಿದ್ದ ಹಾಗೆಯೇ ಚಿಕ್ಕ ವಿಷಯ ಬಂದರೂ ಕಷ್ಟವೆನ್ನುತ್ತೀರಿ. ಮನೆಗೆ ಅಥವಾ ಸೆಂಟರ್ ಗೆ ಹೋದ ನಂತರ ಯಾವುದೋ ಒಂದು ವಿಷಯ ತಪ್ಪದೇ ಪರೀಕ್ಷೆಯಾಗಿ ಬರುತ್ತದೆ. ಡಬಲ್ ವಿದೇಶಿಯರಿಗೆ ಸಹಜವೆನಿಸುತ್ತದೆಯೇ, ಅಥವಾ ಕಷ್ಟವೆನಿಸುತ್ತದೆಯೇ? ಸಹಜ ಎಂದುಕೊಳ್ಳುವವರು ಕೈಯನ್ನೆತ್ತಿರಿ. ಟೀಚರ್ಸ್ ಮೊದಲ ನಂಬರ್ ಪಡೆಯುತ್ತೀರಲ್ಲವೇ? ಮತ್ತೆ ಆ ಸಮಯದಲ್ಲಿ ನಮಗೆ ತಿಳಿಯಲೇ ಇಲ್ಲ, ನಮಗೆ ಆ ಜ್ಞಾನವಿಲ್ಲ, ಎಂದು ಹೇಳಬಾರದು. ಆದ್ದರಿಂದ ಬಾಪ್‌ದಾದಾ ಮೊದಲೇ ಇದರಲ್ಲಿ ಅಂಕಗಳು ಜಮಾ ಆಗುತ್ತದೆ ಮತ್ತು ಇದರಲ್ಲಿ ಅಂಕಗಳು ಕಟ್ ಆಗುತ್ತವೆ ಎಂದು ತಿಳಿಸುತ್ತಿದ್ದಾರೆ. ಒಂದು ವೇಳೆ ಮೊದಲನಂಬರ್ ಪಡೆಯಬೇಕೆಂದುಕೊಂಡರೆ ಅಲಂಕರಿಸಿಕೊಳ್ಳಿರಿ. **ಈಗಿನ್ನು ಯಾರಾದರೂ ಮಾಡಬಹುದು ಇನ್ನೂ ಯಾವ ಸ್ಥಾನಗಳನ್ನೂ**

**ನಿರ್ಣಯಿಸಿಲ್ಲ. ಬ್ರಹ್ಮಾತಂದೆ ಮತ್ತು ಜಗದಂಬ ಸರಸ್ವತಿಯ ಸ್ಥಾನಗಳ ಹೊರತು ಉಳಿದ ಎಲ್ಲಾ ಸ್ಥಾನಗಳು ಖಾಲಿಯಾಗಿವೆ ಯಾರಾದರೂ ತೆಗೆದುಕೊಳ್ಳಬಹುದು.** ಒಂದು ವರ್ಷದಲ್ಲಿ ಯಾರಾದರೂ ಪಡೆಯಬಹುದು.

ಹಾಗಾದರೆ ಸದಾ ಏನನ್ನು ನೆನಪಿಟ್ಟುಕೊಳ್ಳುತ್ತೀರಿ? ನಿಮ್ಮ ವಿಶೇಷತೆಗಳನ್ನು ನೆನಪಿಟ್ಟುಕೊಳ್ಳಿರಿ. ವಿಶೇಷವಾಗಿ ಭಾವಿಸಿದರೆ ಈ ಆಟಗಳು ಇರುವುದಿಲ್ಲ. ಈಗ ಮತ್ತು ಇಡೀ ಕಲ್ಪದಲ್ಲಿ ಕೂಡ ವಿಶೇಷವಾಗುತ್ತೀರಿ. ಇನ್ನೂ ಯಾವ ಧರ್ಮನೇತರು ಅಥವಾ ಮಹಾನಾತ್ಮರಿಗೆ ಕೂಡ ಇಂತಹ ವಿಧಿಪೂರ್ವಕವಾದ ಪೂಜೆ ಆಗುವುದಿಲ್ಲ. ದೇವತೆಗಳಿಗೆ ಆದಷ್ಟು ಇನ್ಯಾರಿಗೂ ಪೂಜೆ ಆಗುವುದಿಲ್ಲ. ನೇತರ ವಿಗ್ರಹಗಳನ್ನಂತೂ ಬಿಸಿಲಿನಲ್ಲಿ ಇಟ್ಟು ಬಿಡುತ್ತಾರೆ. ಒಳ್ಳೆಯದು.

***ನಾಲ್ಕೂ ಕಡೆಯ ಸರ್ವ ವಿಶ್ವದ ವಿಶೇಷ ಆತ್ಮರಿಗೆ ಸದಾ ಸ್ವಚಿಂತನೆ, ಜ್ಞಾನಚಿಂತನೆ ಮಾಡುವ ಶ್ರೇಷ್ಠ ಆತ್ಮರಿಗೆ, ಸದಾ ತಂದೆಯ ಶ್ರೇಷ್ಠ ಮತದಂತೆ ಪ್ರತಿಯೊಂದು ಸಂಕಲ್ಪ. ನುಡಿ ಹಾಗೂ ಕರ್ಮವನ್ನು ಮಾಡುವ ಸಮೀಪ ಆತ್ಮರಿಗೆ, ನಾಲ್ಕೂ ಕಡೆಯ ಡೈಮಂಡ್ ಜೂಬ್ಲಿಯ ಸಲುವಾಗಿ ಸ್ವಯಂ ತಮ್ಮನ್ನು ಹಾಗೂ ಸೇವೆಯನ್ನು ವೃದ್ಧಿ ಮಾಡುವ ವಿಶೇಷ ಆತ್ಮರಿಗೆ ಬಾಪ್‌ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 25-11-1995.

***ಪರಮತ, ಪರ ಚಿಂತನೆ, ಹಾಗೂ ಪರದರ್ಶನದಿಂದ ಮುಕ್ತರಾಗಿ ಪರೋಪಕಾರಿಯಾಗಿರಿ.***

ಪುರುಷಾರ್ಥ ಕಡಿಮೆಯಾಗಲು, ಬಲಹೀನವಾಗಲು ಮೂರು ಕಾರಣಗಳಿವೆ. ಆ ಮೂರು ಕಾರಣಗಳೇನೆಂದರೆ ಪರಮತ, ಪರಚಿಂತನೆ, ಪರದರ್ಶನ. 1.ಪರಮತ: ನಡೆಯುತ್ತಾ, ನಡೆಯುತ್ತಾ ಶ್ರೀಮತದಲ್ಲಿ ಆತ್ಮರ ಮತವನ್ನು ಕೂಡ ಮಿಶ್ರಣ ಮಾಡುತ್ತಿದ್ದಾರೆ. ಯಾರೋ ಒಬ್ಬರು ಯಾವುದೋ ಒಂದು ವಿಷಯವನ್ನು ಹೇಳಿದರು. ನೀವು ಅವರು ಒಳ್ಳೆಯವರು, ಸತ್ಯವಾದ ಮಹಾರಥಿ ಎಂದು ತಿಳಿದು ನಿಮಗೆ ಅವರ ಮೇಲೆ ವಿಶ್ವಾಸವೂ ಬರುತ್ತದೆ. ಆದ್ದರಿಂದ ಆ ಆತ್ಮ ಎಂತಹ ವಿಷಯಗಳನ್ನು ಹೇಳುತ್ತದೆ ಎಂದರೆ ಅವು ಕೇಳಬೇಕೆಂಬ ಅಭಿರುಚಿ ನಿಮ್ಮಲ್ಲಿ ಬರುತ್ತದೆ. 2. ಪರ ಚಿಂತನೆ: ಅವರಿಗೆ ಯಾವಾಗಲೂ ಸ್ವ ಚಿಂತನೆ ಇರುವುದಿಲ್ಲ. ಪರಚಿಂತನೆ ಮಾಡುವವರು ಯಾವ ವಿಷಯ ನಡೆದರೂ ತಮ್ಮ ತಪ್ಪನ್ನು ಕೂಡ ಇತರರ ಮೇಲೆ ಇಟ್ಟುಬಿಡುತ್ತಾರೆ ಮತ್ತು ಪರಚಿಂತನೆ ಮಾಡುವವರು ವಿಷಯಗಳನ್ನು ತಯಾರು ಮಾಡುವುದರಲ್ಲಿ ನಂಬರ್‌ವನ್ ಆಗಿ ಇರುತ್ತಾರೆ. ಅವರ ತಪ್ಪನ್ನು ಕೂಡ ಬೇರೆಯವರ ಮೇಲೆ ಇಟ್ಟು ಕೇಳುವ ದೊಡ್ಡವರು ಕೂಡ ನಿಶ್ಶಬ್ದವಾಗುವಂತೆ ಪ್ರಮಾಣೀಕರಿಸುತ್ತಾರೆ. ಮೂರನೇ ವಿಷಯ: ಪರದರ್ಶನ ಅನ್ಯರನ್ನು ನೋಡುವುದರಲ್ಲಿ ಬಹಳ ಬುದ್ಧಿವಂತರಾಗಿದ್ದೀರಿ, ಪರದರ್ಶನ ಎಂದರೆ ಏನು ನೋಡುತ್ತಾರೆಯೋ ಆ ವಿಷಯ ಬುದ್ಧಿಯಲ್ಲಿ ಹೋಗುತ್ತದೆ ಅಲ್ಲವೇ. ಅನ್ಯರನ್ನು ನೋಡುವುದರಲ್ಲಿ ಸಮಯವನ್ನು ಉಪಯೋಗಿಸುವವರಿಗೆ ಸ್ವಯಂ ಅನ್ನು ನೋಡಲು ಸಮಯವು ಲಭಿಸುವುದಿಲ್ಲ. ಆದ್ದರಿಂದ ಪರಮತ, ಪರಚಿಂತನೆ ಮತ್ತು ಪರದರ್ಶನದಿಂದ ಮುಕ್ತರಾಗಿ, ಪರೋಪಕಾರಿ ಆಗಿರಿ ಎಂದು

ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನನ್ನ ಅದೃಷ್ಟದಿಂದ ಅದೃಷ್ಟ ರೇಖೆಯನ್ನು ಹೆಚ್ಚು ಮಾಡಿಕೊಳ್ಳುವ ಪವಿತ್ರ ಸ್ವರೂಪ.

2. ನಾನು ಯಾವ ವ್ಯಕ್ತಿಯ ಬಗ್ಗೆ ಎಂತಹ ಸಮಾಚಾರವನ್ನು ಕೇಳಿದರು ಕೂಡ ಆ ವ್ಯಕ್ತಿಯ ಪ್ರತಿ ದೃಷ್ಟಿಯಲ್ಲಾಗಲಿ, ಸಂಕಲ್ಪದಲ್ಲಾಗಲಿ ಅಸಹ್ಯ ಭಾವನೆಯನ್ನು ಇಟ್ಟುಕೊಳ್ಳದೇ ಬಿಂದುವನ್ನಿಟ್ಟು ಕಲ್ಯಾಣ ಮಾಡಿದ್ದೇನೆ. (ಅಸಹ್ಯ ಭಾವನೆ ಹೆಚ್ಚಾದರೆ ಆ ವ್ಯಕ್ತಿಯ ಪ್ರತಿ ಸೇವೆಯನ್ನು ಮಾಡಬೇಕೆಂಬ ಭಾವನೆ ಇರುವುದಿಲ್ಲ, ಭಾರವೆನಿಸುತ್ತದೆ ಇದನ್ನೇ ಶ್ರೀಮತದಲ್ಲಿ ಪರಮತವನ್ನು ಬೆರೆಸುವುದು ಎಂದು ಕರೆಯುತ್ತಾರೆ.)

3. ನಾನು ನನ್ನಲ್ಲಿರುವ ಸೂಕ್ಷ್ಮ ದೋಷಗಳನ್ನು ಸಣ್ಣ ಪುಟ್ಟ ತಪ್ಪುಗಳನ್ನು, ದೌರ್ಬಲ್ಯಗಳನ್ನು ಚಿಂತನೆ ಮಾಡಿ ತೊಲಗಿಸಿಕೊಂಡು ಪರಿವರ್ತನೆ ಮಾಡಿಕೊಳ್ಳುವ ಸ್ವಚಿಂತನೆ ಮಾಡಿದ್ದೇನೆ.

4. ನಾನು ಅನ್ಯರಿಗೆ ಹೇಳುವ ಉಪನ್ಯಾಸವನ್ನು ಮೊದಲು ಸ್ವಯಂನಲ್ಲಿ ಪರಿಶೀಲಿಸಿಕೊಂಡು ಧಾರಣೆಯಿಂದ ಪ್ರಭಾವ ಹಾಕಿ ನನ್ನ ಸೇವೆಯ ಖಾತೆಯಲ್ಲಿ ಅಂಕಗಳನ್ನು ಜಮಾ ಮಾಡಿಕೊಂಡಿದ್ದೇನೆ. (ಸೇವೆಗೆ ಒಂದು ಅಂಕವಾದರೆ ಧಾರಣೆಗೆ 10 ಅಂಕಗಳು)

5. ನಾನು ನನ್ನ ಚಹರೆಯಿಂದ, ನಡವಳಿಕೆಯಿಂದ ಬಾಪ್‌ದಾದಾರವರ ಸಾಕ್ಷಾತ್ಕಾರವನ್ನು ಮಾಡಿಸಿ ತಂದೆಯ ನೆನಪನ್ನು ತರಿಸುವ ನಂಬರ್‌ವನ್ ಸೇವೆಯನ್ನು ಮಾಡಿದ್ದೇನೆ.

6. ನಾನು ಕಲ್ಯಾಣದ ಸ್ವಾರ್ಥದಿಂದ ಸೇವೆಯನ್ನು ಮಾಡುವ ನಿಸ್ವಾರ್ಥ ಸೇವಾಧಾರಿ.

7. ನಾನು ಎಂತಹ ವಿಷಯಗಳಲ್ಲಾದರೂ ಸ್ವ ಸ್ಥಿತಿಯನ್ನು ಸ್ಥಿರವಾಗಿಟ್ಟು ಬಿಂದುವನ್ನು ಇಡುವಷ್ಟು ನನ್ನ ಬ್ರೇಕ್ ಅನ್ನು ಶಕ್ತಿಶಾಲಿಯನ್ನಾಗಿ ಮಾಡಿಕೊಂಡು ಜವಾಬ್ದಾರಿಯನ್ನು ತೆಗೆದುಕೊಂಡಿರುವ ವಿಶ್ವಕಲ್ಯಾಣಕಾರಿ.

8. ನಾನು ಪರಮತ, ಪರಚಿಂತನೆ ಮತ್ತು ಪರದರ್ಶನದಿಂದ ಮುಕ್ತವಾಗಿ ಪರೋಪಕಾರಿ ಆಗಿದ್ದೇನೆ.